**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.1241/2019**

**ಪಿಡಬ್ಲೂ-11**

**ಸಿಡಬ್ಲೂ-20**

| | | |
|---|---|---|
| ಸಾಕ್ಷಿದಾರರ ಹೆಸರು | - | ಸಂದೇಶ್ ಕುಮಾರ್ |
| ತಂದೆಯ ಹೆಸರು | - | ನಾಗರಾಜ್ |
| ವಯಸ್ಸು | - | 45 ವರ್ಷ |
| ಕೆಲಸ | - | ಎ ಸಿ ಪಿ, ಮೈಸೂರು |
| ವಾಸ | - | ಮೈಸೂರು |

ದಿನಾಂಕ 08-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

ದಿ:13-03-2009 ರಿಂದ ದಿ:24.06.2011 ವರೆಗೆ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ವೃತ್ತನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿ:26.09.2010 ರಂದು ಸದರಿ ಪ್ರಕರಣದ ಮುಂದಿನ ತನಿಖೆಯ ಸಲುವಾಗಿ ಕಡತಗಳನ್ನು ಚಾಸಾ 18 ರವರಿಂದ ಪಡೆದುಕೂಂಡು ಪರಿಶೀಲನೆ ನಡೆಸಿರುತ್ತೆನೆ. ಸದರಿ ಪ್ರಕರಣದ ಆರೋಪಿಗಳ ಪತ್ತೆಗಾಗಿ ಚಾಸಾ 18 ಅವರ ಸಮ್ಮುಖದಲ್ಲಿ ಸಿಬ್ಬಂದಿಗಳನ್ನು ನೇಮಕಗೊಳಿಸಿ ಆರೋಪಿಗಳ ಪತ್ತೆಗಾಗಿ ಕ್ರಮ ಜರುಗಿಸಿರುತ್ತೇನೆ. ದಿ:30.10.2010 ರಂದು ಪಿರಿಯಾಪಟ್ಟಣ ವೃತ್ತ ನಿರೀಕ್ಷಕರರಾದ ಚಾಸಾ 19 ರವರಿಂದ ಒಂದು ಪತ್ರವನ್ನು ಸ್ವೀಕರಿಸಿ ಸದರಿ ಪತ್ರದೊಂದಿಗೆ ಈ ಪ್ರಕರಣಕ್ಕೆ ಸಂಬಂದಪಟ್ಟ ಒಂದು ನೋಕಿಯಾ 1616 ಮೊಡೆಲ್ ನ ಮೊಬೈಲ್ ಪೋನ್, ಒಂದು ಹೆಚ್ ಎಂ ಟಿ ಕ್ವಾರ್ಟ್ಜ ವಾಚನ್ನು ಹಾಗೂ ಅದರೊಂದಿಗೆ ಲಗಿತ್ತಿಸಿದ ಅಮಾನತ್ತು ಮಹಜರ್ ಮತ್ತು ಪಿ ಎಫ್ ನಂ.139/2010 ರ ಪ್ರತಿಯನ್ನು ಪಡೆದಿರುತ್ತೇನೆ. 1 ಹಾಗೂ 2 ನೇ ಆರೋೇಪಿ ಇವರ ಸ್ವಇಚ್ಚಾ ಹೇಳಿಕೆಗಳನ್ನು ಚಾಸಾ 19 ರವರು ಪಡೆದಿದ್ದು ಸದರಿ ಹೇಳಿಕೆಗಳ ಪ್ರತಿಗಳನ್ನು ಪಿ ಎಫ್ ನೊಂದಿಗೆ ನಾನು ಪಡೆದಿರುತ್ತೇನೆ.

ಕೃತ್ಯ ನಡೆದ ಸ್ಥಳ ಕೆ ಆರ್ ನಗರ ಆದ್ದರಿಂದ ಸದರಿ ಕೃತ್ಯ ಎಸಗಿದ ಆರೋಪಿಗಳು ಹಾಗೂ ಅದಕ್ಕೆ ಸಂಬಂದಪಟ್ಟ ವಸ್ತುಗಳು ಪಿರಿಯಾಪಟ್ಟಣದಲ್ಲಿ ಅಮಾನತ್ತು ಪಡೆಯಲಾಗಿದ್ದು ಸದರಿ ಸಂಗತಿಗಳ ಮೇರೆಗೆ ಪಿರಿಯಾಪಟ್ಟಣದ ನ್ಯಾಯಾಲಯಕ್ಕೆ ಚಾಸಾ 19 ರವರು ಸದರಿ ಪ್ರಕರಣವನ್ನು ಕೆ ಆರ್ ನಗರ ನ್ಯಾಯಾಲಯಕ್ಕೆ ವರ್ಗಾವಣೆ ಕೋರಿ ಸಲ್ಲಿಸಿದ ಅರ್ಜಿಯ ಮೇರೆಗೆ ಸದರಿ ಪ್ರಕರಣದಲ್ಲಿ ವಿಚಾರಣೆಯನ್ನು ನಾನು ಕೆ ಆರ್ ನಗರದಲ್ಲಿ ಮುಂದುವರೆಸಿರುತ್ತೇನೆ. ಚಾಸಾ 19 ರವರು ನೀಡಿದ ನೋಕಿಯಾ 1616 ಮೊಬೈಲ್ ಹಾಗೂ ಹೆಚ್ ಎಂ ಟಿ ಕ್ವಾರ್ಟ್ಜ ವಾಚನ್ನು ಮಾಲು ಪಟ್ಟಿ ಸಂಖ್ಯೆ 202/2010 ರಂತೆ ದಿ:30.10.2010

ರಂದು ನ್ಯಾಯಾಲಯಕ್ಕೆ ಸಲ್ಲಸಿರುತ್ತೇನೆ. ನಾನು ಮೊಬೈಲ್ ಹಾಗೂ ವಾಚುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಸದರಿ ಮೊಬೈಲ್ ಹಾಗೂ ವಾಚನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿರುತ್ತಾರೆ. ಸದರಿ ವಸ್ತುಗಳನ್ನು ಈಗಾಲೇ ಮೂಮಾ 1 ಹಾಗೂ 2 ಎಂದು ಗುರುತಿಸಲಾಗಿದೆ.

ನಂತರ ಆರೋಪಿಗಳು ಆರೋಪಿ ಎಸಗಿದ್ದು ದೃಡವಾದ ನಂತರ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು: ಶ್ರೀ. ಕೆ ಪಿ ಎಂ ವಕೀಲರಿಂದ 1 ಹಾಗೂ 2 ನೇ ಆರೋಪಿಗಳ ಪರ ವಕೀಲರುಃ**

ನಾನು ಚಾಸಾ 18 ರವರಿಂದ ಸದರಿ ಪ್ರಕರಣದ ಕಡತಗಳನ್ನು ಪಡೆದಿರುವ ಬಗ್ಗೆ ಸಾಕ್ಷಿ ನುಡಿದಿದ್ದು ಆ ರೀತಿ ಕಡತಗಳನ್ನು ಪಡೆಯುವ ಸಮಯದಲ್ಲಿ ಯಾವುದೇ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ. ನಾನು ಸದರಿ ಪ್ರಕರಣದ ಕಡತಗಳನ್ನು ಪಡೆದ ನಂತರವೇ ಪರಿಶೀಲನೆ ಪ್ರಾರಂಭಿಸಿದೆ ಎಂದರೆ ಸರಿ.

ಹೆಚ್ ಎಂ ಟಿ ವಾಚ್ ಎಂದು ನಾನು ಚಾಸಾ 19 ರವರಿಂದ ಪಡೆದಿದ್ದು ಆದರೆ ಸದರಿ ವಾಚ್ ನ ಬಣ್ಣ ಹಾಗೂ ಅದಕ್ಕೆ ಕೈಗೆ ಕಟ್ಟಲು ಉಪಯೋಗಿಸಿದ ವಸ್ತು ಅದು ಲೆದರ್ ಬೆಲ್ಟ ಅಥವಾ ಚೈನ್ ಎಂಬುವ ಬಗ್ಗೆ ನಿರ್ಧಿಷ್ಟವಾಗಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಸದರಿ ವಸ್ತುವನ್ನು ಚಾಸಾ 19 ರವರು ವಶಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಇವರುಗಳು ಸದರಿ ಪ್ರಕರಣಕ್ಕೆ ಸಂಬಂದಪಟ್ಟ ಹಾಗೆ ರೂ 2 ಸಾವಿರಗಳನ್ನು ದೂಚಿರುವ ಬಗ್ಗೆ ಹೇಳಿದ್ದು ಆ ರೀತಿ ದೋಚಿದ ಹಣವನ್ನು ಸದರಿ ಪ್ರಕರಣದಲ್ಲಿ ಪಿ ಎಫ್ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿದ್ದೀರ ಎಂದರೆ ಸಾಕ್ಷಿ ಸದರಿ ರೂ 2 ಸಾವಿರಗಳನ್ನು ಆರೋಪಿಗಳು ದೋಚಿದ್ದು ಹಾಗೂ ಆ ಹಣವನ್ನು ಖರ್ಚು ಮಾಡಿರುವ ಬಗ್ಗೆ ಚಾಸಾ 19 ರವರು ಆರೋಪಿಗಳ ಸ್ವ ಇಚ್ಛಾ ಹೇಳಿಕೆ ಪಡೆಯುವುದರ ಮುಖಾಂತರ ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಹಾಗಾಗಿ ನಾನು ಚಾಸಾ 19 ರವರು ನೆಡೆಸಿದ ವಿಚಾರಣೆಯ ಆದಾರದ ಮೇಲೆ ಆರೋಪಿ 1 ಹಾಗೂ 2 ರವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ.
ಮರು ವಿಚಾರಣೆ - ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ